# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ವಾಣಿ ದಿನಾಂಕ : DATE : 18/6/2020

8884432666 ● ಸಂಪುಟ 9 ● ಸಂಚಿಕೆ 204

# ರಾಜ್ಯ ಕಾಂಗ್ರೆಸ್‌ಗೂ ಅಚ್ಚರಿಯ ಆಘಾತ

ವಿ.ವಾ. 18.06.20.

## ಬಿಕೆ, ನಸೀರ್‌ಗೆ ಪರಿಷತ್ ಚಾನ್ಸ್

ಬೆಂಗಳೂರು: ರಾಜ್ಯಸಭೆ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ರಾಜ್ಯ ಬಿಜೆಪಿಗೆ ಪಕ್ಷದ ವರಿಷ್ಠರು ನೀಡಿದ್ದ ಶಾಕ್ ನಂತೆಯೇ ಕಾಂಗ್ರೆಸ್ ಹೈಕಮಾಂಡ್ ಕೂಡ ವಿಧಾನ ಪರಿಷತ್ ಸ್ಥಾನಕ್ಕೆ ಅಚ್ಚರಿ ಆಯ್ಕೆ ಮಾಡಿ ರಾಜ್ಯ ಘಟಕಕ್ಕೆ ಹೆಸರು ಕಳುಹಿಸಿಕೊಟ್ಟಿದೆ.

ವಿಧಾನಪರಿಷತ್‌ನ ಏಳು ಸ್ಥಾನಗಳಿಗೆ ನಡೆಯುವ ಚುನಾವಣೆಗೆ ಬುಧವಾರ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದ್ದು, ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್ ಮತ್ತು ನಸೀರ್ ಅಹ್ಮದ್ ಅವರಿಗೆ ಅವಕಾಶ ಕಲ್ಪಿಸಿದೆ. ಇವರಿಬ್ಬರೂ ಗುರುವಾರ ಬೆಳಗ್ಗೆ ನಾಮಪತ್ರ ಸಲ್ಲಿಸಲಿದ್ದಾರೆ. 200ಕ್ಕೂ ಹೆಚ್ಚು ಆಕಾಂಕ್ಷಿಗಳು ಅವಕಾಶ ಕೋರಿ ಅರ್ಜಿ ಸಲ್ಲಿಸಿದ್ದು, 30 ಪ್ರಮುಖ ಹೆಸರುಗಳನ್ನು ಪಕ್ಷದ ರಾಜ್ಯ ನಾಯಕರು ಪರಿಗಣಿಸಿದ್ದರು. ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗಕ್ಕೆ ಒಂದೊಂದು ಸ್ಥಾನ ನೀಡಬೇಕೆಂಬ ತೀರ್ಮಾನ ಮಾಡಿ ಅಭಿಪ್ರಾಯ ಸಂಗ್ರಹಿಸಿದ್ದರು.

ಈ ನಡುವೆ ವಿವಿಧ ಸಂದರ್ಭದಲ್ಲಿ ಸ್ಥಾನ ಬಿಟ್ಟುಕೊಟ್ಟು ಈಗ ಅವಕಾಶ



ಹರಿಪ್ರಸಾದ್



ನಸೀರ್

ಕೋರಿದ್ದವರು ಪ್ರತ್ಯೇಕವಾಗಿ ಪ್ರಯತ್ನ ನಡೆಸಿದ್ದರು. ಅಲ್ಪಸಂಖ್ಯಾತರಲ್ಲೇ ಮುಸ್ಲಿಂ ಪಂಗಡ ಮತ್ತು ಕ್ರಿಶ್ಚಿಯನ್ನರ ನಡುವೆ ಪೈಪೋಟಿ ನಡೆದಿತ್ತು. ಅಂತಿಮವಾಗಿ ಸಿದ್ದರಾಮಯ್ಯ ಪ್ರಸ್ತಾಪಿಸಿದ ನಸೀರ್ ಅಹ್ಮದ್ ಅವರಿಗೆ ಅವಕಾಶ ಸಿಕ್ಕಿದೆ. ಡಿ.ಕೆ. ಶಿವಕುಮಾರ್ ಹಿಂದುಳಿದ ವರ್ಗಗಳ ಕೋಟಾದಲ್ಲಿ ಎಂ.ಆರ್. ಸೀತಾರಾಂ ಹೆಸರು ಸೂಚಿಸಿದ್ದರು. ಆದರೆ, ಹೈಕಮಾಂಡ್ ಹರಿಪ್ರಸಾದ್ ಹೆಸರು ಅಂತಿಮಗೊಳಿಸಿ ಕೆಪಿಸಿಸಿಗೆ ಅಚ್ಚರಿ ಮೂಡಿಸಿದೆ.